633 ಶ್ರೀ ಶಿವಕುಮಾರ್ ಡಿ.ಕೆ.(ಕನಕಪುರ ಕ್ಷೇತ್ರ) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ॥ ನಂಜುಂಡಪ್ಪ ವರದಿ ಯೋಜನೆಯಡಿಯಲ್ಲಿ ಹಿಂದುಳಿದ, ಅತಿಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ವಿವಿಧ ಯೋಜನೆಯಡಿಯಲ್ಲಿ ಜಿಲ್ಲಾವಾರು ಹಾಗೂ ಒಟ್ಟಾರೆ ತಾಲ್ಲೂಕುಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು;

ಆ) ಹಾಗಿದ್ದಲ್ಲಿ, ಜಿಲ್ಲಾ ಹಾಗೂ ತಾಲ್ಲೂಕುವಾರು ಬಿಡುಗಡೆಯಾದ ಅನುದಾನದಲ್ಲಿ ಖರ್ಚಾಗಿರುವ ಅನುದಾನ ಹಾಗೂ ಬಾಕಿ ಉಳಿದಿರುವ ಅನುದಾನದ ವಿವರಗಳನ್ನು ನೀಡುವುದು;

ಇ) ಈ ಯೋಜನೆಯಡಿಯಲ್ಲಿ ಖರ್ಚಾಗದೆ ಉಳಿದಿರುವ ಅನುದಾನವನ್ನು ಖರ್ಚು ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಈ) ಈ ಯೋಜನೆಯಲ್ಲಿನ ಅನುದಾನವನ್ನು ನಿಗದಿತ ವೇಳೆಗೆ ಬಿಡುಗಡೆ ಮಾಡಲಾಗಿದೆಯೇ?

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಡಾ॥ ನಂಜುಂಡಪ್ಪ ವರದಿ ಅನುಸಾರವಾಗಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಿಂದುಳಿದ, ಅತಿಹಿಂದುಳಿದ ಹಾಗೂ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ವಿವಿಧ ಯೋಜನೆಯಡಿಯಲ್ಲಿ ಜಿಲ್ಲಾವಾರು ಹಾಗೂ ಒಟ್ಟಾರೆ ತಾಲ್ಲೂಕುಗಳಿಗೆ 2007–08 ಮತ್ತು 2008–09ರಲ್ಲಿ ಸರ್ಕಾರದಿಂದ ಬಿಡುಗಡೆಯಾದ ಹಣದ ವಿವರ ಹೀಗಿದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಬಿಡುಗಡೆಯಾದ ಹಣ
2007–08	951.44
2008–09	1710.42

ಆ) ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಬಿಡುಗಡೆಯಾದ ಹಣದಲ್ಲಿ ಖರ್ಚಾಗಿರುವ ಅನುದಾನದ ವಿವರ ಹೀಗಿದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಬಿಡುಗಡೆಯಾದ ಹಣ	ಖರ್ಚಾದ ಹಣ	ಬಾಕಿ ಉಳಿದ ಹಣ
2007–08	951.44	945.99	5.45
2008–09	1710.42	1739.41 *	–

* ಬಿಡುಗಡೆ ಮಾಡಿದ ಹಣಕ್ಕಿಂತ ಹೆಚ್ಚು ಖರ್ಚಾಗಿರುವುದಕ್ಕೆ ಕಾರಣ ಇಂಧನ ಇಲಾಖೆಯಡಿಯಲ್ಲಿ ವಿದ್ಯುಚ್ಛಕ್ತಿ ವಿತರಣಾ ಕಂಪನಿಗಳು ಸರ್ಕಾರ ಬಿಡುಗಡೆ ಮಾಡಿದ ಹಣವಲ್ಲದೆ ತಮ್ಮ ಸ್ವಂತ ಸಂಪನ್ಮೂಲದಿಂದ ಹಿಂದುಳಿದ ತಾಲ್ಲೂಕುಗಳಿಗೆ ವೆಚ್ಚ ಮಾಡಿರುತ್ತವೆ.

ಇ) ಸರ್ಕಾರದಿಂದ ಮಂಡಳಿ ಅಥವಾ ನಿಗಮಗಳಿಗೆ ಮೂಲಭೂತ ಸೌಕರ್ಯ/ಸಿವಿಲ್ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಅನುದಾನವು ಲ್ಯಾಪ್ಸ್ ಆಗುವುದಿಲ್ಲ. ಈ ಅನುದಾನವನ್ನು ಮಂಡಳಿ ಅಥವಾ ನಿಗಮಗಳು ಮುಂದಿನ ವರ್ಷದಲ್ಲಿ ವಿನಿಯೋಗಿಸಬಹುದು. ಆದರೆ ಕೆಲವು ಇಲಾಖೆಗಳಿಗೆ ಬಿಡುಗಡೆ ಮಾಡಿದ ಹಣವು ಖರ್ಚಾಗದೇ ಇದ್ದಲ್ಲಿ ಇದು ಲ್ಯಾಪ್ಸ್ ಆಗುವುದು.

ಈ) ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೆಲವು ಕಾರ್ಯಕ್ರಮಗಳು ಕೇಂದ್ರ ಸರ್ಕಾರದ ಯೋಜನೆಗಳಾಗಿವೆ ಇದಲ್ಲದೆ ನಬಾರ್ಡ್ ನೆರವಿನ ಯೋಜನೆಗೂ ಸಹ ಇರುವುದರಿಂದ ಇಂತಹ ಯೋಜನೆಗಳಿಗೆ ಕೇಂದ್ರ ಸರ್ಕಾರ/ನಬಾರ್ಡ್ ಅನುಮೋದನೆ ದೊರೆತ ನಂತರ ಹಣ ಬಿಡುಗಡೆ ಮಾಡಬೇಕಾಗುವುದು. ಯೋಜನೆಗಳಿಗೆ ಅನುಮೋದನೆ ದೊರೆತ ನಂತರ ಹಣವನ್ನು ಬಿಡುಗಡೆ ಮಾಡಲಾಗಿದೆ.

522 ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ 2007–08, 2008–09, 2009–10ನೇ ಸಾಲಿಗೆ ಕೆರೆಗಳ ಪುನಃಶ್ಚೇತನಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮವೇನು;

ಆ) ಯಾವ ಯಾವ ಕೆರೆಗಳನ್ನು ಈ ಸಾಲಿನಲ್ಲಿ ಅಭಿವೃದ್ಧಿ ಪಡಿಸಲಾಗಿದೆ; ಇದಕ್ಕೆ ಬಿಡುಗಡೆಗೊಳಿಸಿರುವ ಅನುದಾನದ ಮೊತ್ತವೇನು;